ಜನಗಣತಿ

3303 (3629); ಶ್ರೀ ಶಿವಾನಂದ ಎಸ್. ಪಾಟೀಲ (ಬಸವನಬಾಗೇವಾಡಿ)

ಅ) ಬಹು ನಿರೀಕ್ಷಿತ ಜಾತಿ ಆಧಾರಿತ ಜನಗಣತಿ ಎಂದಿನಿಂದ ಪ್ರಾರಂಭವಾಯಿತು; ಎಷ್ಟು ದಿನಗಳವರೆಗೆ ನಡೆಯಿತು; ಇದಕ್ಕೆ ಮೀಸಲಿಟ್ಟಿದ್ದ ಅನುದಾನವೆಷ್ಟು; ಕೇಂದ್ರ ಸರ್ಕಾರ ನೀಡಿರುವ ಅನುದಾನವೆಷ್ಟು;

ಆ) ಇದಕ್ಕಾಗಿ ಎಷ್ಟು ಜನ ಸಿಬ್ಬಂದಿಗಳನ್ನು ನೇಮಿಸಲಾಗಿತ್ತು; ಎಲ್ಲಾ ಜಿಲ್ಲೆಗಳಲ್ಲೂ ಜನಗಣತಿಯ ಕಾರ್ಯ ಯಶಸ್ವಿಯಾಗಿ ನಡೆಸಲಾಗಿದೆಯೇ;

ಇ) ಅಂತಿಮ ವರದಿ ಯಾವಾಗ ಲಭ್ಯವಾಗಬಹುದು; ಯಾವ ಯಾವ ತರಹದ ಮಾಹಿತಿಗಳು ಇದರಿಂದ ಲಭ್ಯವಾಗಬಹುದು?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕೆಯು ದಿನಾಂಕ 11.04.2015 ರಿಂದ ಪ್ರಾರಂಭವಾಗಿ ದಿ:15.05.2015 ರವರೆಗೆ ಒಟ್ಟು 35 ದಿನಗಳ ಕಾಲ ಸಮೀಕ್ಷೆಯನ್ನು ನಡೆಸಲಾಗಿದೆ.
ಈ ಸಮೀಕ್ಷೆಗೆ ₹. 189.00 ಕೋಟಿಗಳನ್ನು ಅಂದಾಜು ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ₹. 21.05 ಕೋಟಿಗಳ ಅನುದಾನವನ್ನು ಒದಗಿಸಲಾಗಿದೆ.

ಆ) ಸಮೀಕ್ಷೆಯಲ್ಲಿ ಪ್ರಧಾನ ಸಮೀಕ್ಷಾಧಿಕಾರಿಗಳು, ಹೆಚ್ಚುವರಿ ಪ್ರಧಾನ ಸಮೀಕ್ಷಾಧಿಕಾರಿಗಳು, ಚಾರ್ಜ್ ಅಧಿಕಾರಿಗಳು, ಹೆಚ್ಚುವರಿ ಚಾರ್ಜ್ ಅಧಿಕಾರಿಗಳು, ಮಾಸ್ಟರ್ ಟ್ರೈನರ್ಸ್ ಮೇಲ್ವಿಚಾರಕರು, ಸಂಪನ್ಮೂಲ ವ್ಯಕ್ತಿಗಳು, ಗಣತಿದಾರರು ಹಾಗೂ ಇತರ ಅಧಿಕಾರಿಗಳನ್ನೊಳಗೊಂಡಂತೆ

ಒಟ್ಟು 1.60 ಲಕ್ಷ ಅಧಿಕಾರಿ/ಸಿಬ್ಬಂದಿಗಳು ಸಮೀಕ್ಷಾ ಕಾರ್ಯದಲ್ಲಿ ಭಾಗವಹಿಸಿರುತ್ತಾರೆ.

ಹೌದು. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಸಮೀಕ್ಷೆ ಕಾರ್ಯವು ಯಶಸ್ವಿಯಾಗಿ ನಡೆಸಲಾಗಿದೆ.

ಇ) ಸಮೀಕ್ಷೆಯ ಗಣಕೀಕರಣ ಕಾರ್ಯವು ಪ್ರಗತಿಯಲ್ಲಿದ್ದು, ಇದು ಪೂರ್ಣಗೊಂಡ ನಂತರ ವರದಿಗೆ ಬೇಕಾದ ಕ್ರೋಢಿಕೃತ ಅಂಕಿ ಅಂಶಗಳು/ತಃಖ್ತೆಗಳನ್ನು ಸಿದ್ದಪಡಿಸಿ ವರದಿಗೆ ಅಳವಡಿಸಬೇಕಾಗಿದೆ. ಇದಲ್ಲದೆ, ವಿವಿಧ ಇಲಾಖೆಗಳಿಂದ ಉದ್ಯೋಗ, ಶಿಕ್ಷಣ, ರಾಜಕೀಯ ಸ್ಥಾನಮಾನ ಮುಂತಾದ ವಿಷಯಗಳಿಗೆ ಸೆಕಂಡರಿ ಸೋರ್ಸ್ ಆಫ್ ಡೇಟಾ (Secondary source of data)ವನ್ನು ಪಡೆದು, ವಿಷಯ ತಜ್ಞರ ಅಭಿಪ್ರಾಯಗಳೊಂದಿಗೆ ವಿಶ್ಲೇಷಣೆ ಮಾಡಿ ಮಾಹಿತಿಯನ್ನು ಅಳವಡಿಸಿ ವರದಿಯನ್ನು ಸಿದ್ಧಪಡಿಸಿ ಆದಷ್ಟು ಬೇಗ ಸರ್ಕಾರಕ್ಕೆ ಸಲ್ಲಿಸಲಾಗುವುದು. ಸಮೀಕ್ಷೆಯಲ್ಲಿ ರಾಜ್ಯದಲ್ಲಿರುವ ಕುಟುಂಬಗಳ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ, ರಾಜಕೀಯ ಪ್ರಾತಿನಿಧ್ಯ ಮುಂತಾದವುಗಳಿಗೆ ಸಂಬಂಧಿಸಿದ ಮಾಹಿತಿ ಲಭ್ಯವಾಗಲಿದೆ.

ಹೆಣ್ಣು ಭ್ರೂಣ ಹತ್ಯೆ

3304 (3630); ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ)

ಅ) ಗರ್ಭಪೂರ್ವ ಮತ್ತು ಪ್ರಸವ ಪೂರ್ವ ಲಿಂಗ ಪತ್ತೆ ತಡೆಯುವ ಬಗ್ಗೆ ನಿಗಾ ಇಡಬೇಕಾದ ಜಿಲ್ಲಾ ಮಟ್ಟದ ಸಲಹಾ ಸಮಿತಿಗಳನ್ನು ಕಳೆದ ಎರಡು ವರ್ಷಗಳಿಂದ ರಚನೆ ಮಾಡದಿರಲು ಕಾರಣಗಳೇನು;

ಆ) ರಾಜ್ಯಮಟ್ಟದಲ್ಲಿ ಈ ಸಮಿತಿಯನ್ನು ರಚಿಸಲಾಗಿದೆಯೇ; ಇದರಲ್ಲಿ ಯಾರ್ಯಾರು ಕಾರ್ಯನಿರ್ವಹಿಸುತ್ತಿದ್ದಾರೆ;

ಇ) ಇಲಾಖೆಯಲ್ಲಿ ನೋಂದಣಿಯಾಗಿರುವ ಸ್ಕಾನಿಂಗ್ ಸೆಂಟರ್‌ಗಳು, ಜೆನೆಟಿಕ್ ಕ್ಲಿನಿಕ್‌ಗಳು ಹಾಗೂ ಜೆನೆಟಿಕ್ ಲ್ಯಾಬ್‌ಗಳ ಸಂಖ್ಯೆ ಎಷ್ಟು;